ಸಿ.ಸಿ..ನಂ.165-22

ಪಿ.ಡಬ್ಲ್ಯೂ-1

ದಿನಾಂಕ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎ , ಆರ್ ವಕೀಲರಿಂದಃ**

1. ನಿಪಿ-14 ರ ಪ್ರಕಾರ ದಿಃ 13-4-2017 ರಂದು ಆರೋಪಿ ಶೇರು ಮಾಡಿದ್ದು ಎಂದರೆ ಸರಿ . ನಿಪಿ-10 ರ ಪ್ರಕಾರ ದಿಃ 13-4-2017 ರಂದು ಆರೋಪಿ ಸಾಲವನ್ನು ಪಡೆದುಕೊಂಡಿರುತ್ತಾನೆ ಎಂದು ಕಾಣಿಸುತ್ತದೆ ಎಂದರೆ ಸರಿ . ದಿಃ30-11-2018 ರಂದು ರೂ 2,32,314/- ಹಣವನ್ನು ಆರೊಪಿ ನಿಮ್ಮ ಸಂಸ್ಥೆ ಗೆ ಬಂದು ತುಂಬಿರುತ್ತಾನೆ ಎಂದರೆ ಸರಿಯಲ್ಲ . ಆ ಪ್ರಕಾರ ಸಾಲ ಸಹ ಮುಗಿದಿರುತ್ತದೆ ಎಂದರೆ ಸರಿಯಲ್ಲ . ಆ ನಂತರ ತಿರುಗಿ ಆರೋಪಿ ಯಾವುದೆ ಸಾಲದ ಅರ್ಜಿ ವಗ್ಯೆರೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ಸಾಲದ ಅರ್ಜಿ ಕೊಟ್ಟಿಲ್ಲ ದಿಃ 01-12-2018 ರಂದು ಆರೋಪಿ ಯಾವುದೆ ಸಾಲವನ್ನು ನಿಮ್ಮ ಸಂಸ್ಥೆ ಯಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ಸಾಲ ಚುಕ್ತಾ ಆಗುವ ಸಮಯದಲ್ಲಿ ಆರೋಪಿಯ ಮತ್ತು ಜಾಮಿನುದಾರರ ಸಹಿಗಳನ್ನು ಕೆಲವೊಂದು ದಾಖಲಾತಿಗಳಲ್ಲಿ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ .ಅರೋಪಿ ಹೇಳಿಕೆ ಪ್ರಕಾರ ದಿಃ30-11-2018 ರಂದು ಆತನ ಸಾಲ ಸಂಪೂರ್ಣವಾಗಿ ಸಾಲ ಚುಕ್ತಾ ಅಗಿರುತ್ತದೆ ಎಂದರೆ ಸರಿಯಲ್ಲ . ನಿಪಿ-13 ರಲ್ಲಿ ಯಾರದ್ದು ಸಹಿ ಮತ್ತು ಸೀಲು ಹಾಗೂ ದಿನಾಂಕ ಇಲ್ಲ ಎಂದರೆ ಸರಿಯಲ್ಲ . ನಿಮ್ಮ ಅನೂಕೂಲಕ್ಕೆ ತಕ್ಕಂತೆ ನಿಪಿ-13 ನ್ನು ಸೃಷ್ಟಿ ಮಾಡಿ ಕೊಂಡಿರುತ್ತೀರಿ ಎಂದರೆ ಸರಿಯಲ್ಲ . ನಿಪಿ-11 ವಿನೋದ ಥಾಕು ಖಾರ್ವಿ ಹಾಗೂ ಯೋಗಿನಿ ಥಾಕು ಖಾರ್ವಿ ಬಗ್ಗೆ ಮಾತ್ರ ಬರೆದಿರುತ್ತೀರಿ ಎಂದರೆ ಸರಿ . ದಿಃ30-11-2018 ರಂದು ಸಾಲ ಚುಕ್ತಾ ಆಗುವುದು ಆದರೆ ದಿಃ29-11-2018 ರಂದು ಪುನಃ ಸಾಲ ಕೊಡುವ ಬಗ್ಗೆ ಠರಾವು ಹೇಗೆ ಪಾಸು ಆಗುತ್ತದೆ ಎಂದರೆ ಸಾಲ ತೆಗೆದುಕೊಳುಳವಾಗ ಆ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿರಲಿಲ್ಲ . ಈ ಸಾಲಗಳ ಬಗ್ಗೆ ನಿಮ್ಮ ಮ್ಯಾನೇಜರ ಮತ್ತು ಕ್ಲರ್ಕ ಅವರಿಗೆ ಮಾತ್ರ ಗೊತ್ತು ಉಳಿದವರಿಗೆ ಗೊತ್ತಿಲ್ಲ ಎಂದರೆ ಸರಿ . ಈ ಪ್ರಕಾರವಾಗಿ ಅರೋಪಿ ಹಣ ಮರು ಪಾವತಿ ಮಾಡಿದ ಬಗ್ಗೆ ನಿಮಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ .ದಿಃ01-12-2018 ರಂದು

ನೀವು ಹೊಸ ಸಾಲ ಕೊಟ್ಟಿರುತ್ತೇವೆ ಎಂದು ಸುಳ್ಳು ದಾಖಲಾತಿ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಆರೋಪಿ ಮತ್ತು ಅವರ ಕುಟುಂಬದರು ಮೀನುಗಾರರು ಆಗಿರುವುದರಿಂದ ಅವರು ಹೆಚ್ಚಿನ ಸಮಯ ಸಮುದ್ರದಲ್ಲಿ ಕಳೆಯುತ್ತಾರೆ ಹಾಗಾಗಿ ಅವರು ಊರಿನಲ್ಲಿ ಇರುವುದು ಕಡಿಮೆ ಎಂದರೆ ಸರಿ .ಹಣವನ್ನು ಮರು ಪಾವತಿ ಮಾಡುವುದು ನಿಮ್ಮ ಅಧ್ಯಕ್ಷರು ಅವರ ಮನೆಗೆ ಹೋದಾಗ ಹಣವನ್ನು collect ಮಾಡಿ ಕೊಳ್ಳುತ್ತಾರೆ ಹಾಗಾಗಿ ನೇರವಾಗಿ ಅಧ್ಯಕ್ಷರ ಕೈಯಲ್ಲಿ ಮರು ಪಾವತಿ ಆಗುತ್ತದೆ ಎಂದರೆ ಸರಿಯಲ್ಲ . ಅಧ್ಯಕ್ಷರ ಕೈಯಲ್ಲಿ ಸಂಪೂರ್ಣ ಹಣ ಮರು ಪಾವತಿ ಆಗಿದ್ದರೂ ಅವರು ಪೂರ್ತಿ ಯಾದ ಲೆಕ್ಕಾಚಾರವನ್ನು ಇಲ್ಲಿ ತೋರಿಸುವುದಿಲ್ಲ ಎಂದರೆ ಸರಿಯಲ್ಲ . ಈ ಸಾಲದ ಬಗ್ಗೆ ಅಧ್ಯಕ್ಷರು ಮತ್ತು ಮ್ಯಾನೇಜರ ರವರು ಸಾಕ್ಷ್ಯ ನುಡಿಯಲು ಪೂರ್ತಿಯಾಗಿ ಬಾಧ್ಯಸ್ಥರಾಗುತ್ತಾರೆ ಎಂದರೆ ಸರಿಯಲ್ಲ . ಮೀನುಗಾರರು ಬೆಳಿಗ್ಗೆ 8-00 ಮನೆಯಿಂದ ಹೊರಟರೆ ಒಮ್ಮೊಮ್ಮೆ ರಾತ್ರಿ 2-00 ಗಂಟೆಗೆ ಬರುತ್ತಾರೆ ಎಂದರೆ ಇರಬಹುದು . ಆದ್ದರಿಂದ ಬೆಳಗಿನ ಸಮಯದಲ್ಲಿ ಅಧ್ಯಕ್ಷರು ಅವರ ಮನೆಗೆ ಹೋಗಿ ಹಣ ವಸೂಲಿ ಮಾಡಿಕೊಂಡು ಬರುತ್ತಾರೆ ಎಂದರೆ ಸರಿಯಲ್ಲ . ಅವರು ದಿನದ ಸಮಯದಲ್ಲಿ ಮನೆಯಲ್ಲಿ ಅಥವಾ ಊರಿನಲ್ಲಿ ಇಲ್ಲದೆ ಇರುವ ಕಾರಣ ಅವರು ಮರು ಪಾವತಿ ಮಾಡಿದ ಹಣದ ರಶೀದಿಯನ್ನು ಪಿರ್ಯಾದಿದಾರರ ಸಂಸ್ಥೆಯಿಂದ ಪಡೆದು ಕೊಳಳಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ನಿಜವಾಗಿಯೂ ವಿನೋದ ಹಾಗೂ ಯೋಗಿನಿ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . 2016 ರಲಿಲ ವಿನೋದನ ಸಹೋದರನಾದ ದೀಪಕ ರೂ 2 ಲಕ್ಷ ಸಾಲ ನಿಮ್ಮ ಸಂಸ್ಥೆ.ಯ ಅಧ್ಯಕ್ಷರಿಂದ ಪಡೆದಿರುತ್ತಾನೆ ಎಂದರೆ ಸರಿಯಲ್ಲ .ದಿಃ 30-11-2018 ರಂದು ರೂ 4,50,000 ಸಾಲದ ಹಣವನ್ನು ಬಡ್ಡಿ ಸಮೇತವಾಗಿ ಪೂರ್ತಿ ಚುಕ್ತಾ ಮಾಡಿರುತ್ತಾನೆ ಎಂದರೆ ಸರಿಯಲ್ಲ ಆ ನಾಲ್ಕೂವರೆ ಲಕ್ಷದ ಬಳಿಕ ಅವರ ಕುಟುಬಂದಿಂದ ಯಾರು ಕೂಡ ನಿಮ್ಮ ಸಂಸ್ಥೆಯಿಂದ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ . ಅವರು ಸಾಲವನ್ನು ಮರು ಪಾವತಿ ಮಾಡಿದ್ದರೂ ವಿನೋದ ಖಾರ್ವಿ ರವರ ವಿರುದ್ಧ ರೂ 2 ಲಕ್ಷ ಸಾಲ ದಿಃ03-12-2018 ರಂದು ಯೋಗಿನಿ ಖಾ ರ್ವಿ ಹೆಸರಿನಲ್ಲಿ ರೂ 2 ಲಕ್ಷ ಸಾಲ , ದೀಪಕ ಖಾರ್ವಿ ಹೆಸರಿನಲ್ಲಿರೂ 2 ಲಕ್ಷ ಸಾಲ ಮಾಡಿ ವಿನಾಕಾರಣ ಅವರ ಕುಟುಬಂದ ಮೇಲೆ ರೂ 6 ಲಕ್ಷ ಸಾಲ ಹೊಣೆ ಹಾಕಿರುತ್ತೀರಿ ಎಂದರೆ ಸರಿಯಲ್ಲ . ಹಳೆಯ ಸಾಲಕ್ಕೆ ಕೊಟ್ಟಂತಹ ಚೆಕ ಗಳನ್ನು ದೂರುಪಯೋಗ

ಪಡಿಸಿಕೊಂಡು ಅರೋಪಿ ಮೇಲೆ ಮತ್ತು ಸಂತೋಷ ಖಾರ್ವಿ ಹಾಗೂ ಯೋಗಿನಿ ಖಾರ್ವಿ ಮೇಲೆ 3 ಸುಳ್ಳು ಚೆಕ್ ಬೌನ್ಸ ಪ್ರಕರಣ ಮಾಡಿರುತ್ತಿರಿ ಎಂದರೆ ಸರಿಯಲ್ಲ .ದೀಪಕ ಖಾರ್ವಿ ಯವರು ಯಾವಾಗ ನಿಮಂ ಸಂಸ್ಥೆ. ರೂ ನಾಲ್ಕುವರೆ ಹಣ ಮರು ಪಾವತಿ ಮಾಡಿರುತ್ತಾನೊ ಆ ನಂತರ ಅವರ ಕುಟುಂಬದಿಂದ ನಿಮ್ಮ ಸಂಸ್ಥೆ ಗೆ ಯಾವುದೆ ಹಣ ಮರು ಪಾವತಿ ಮಾಡುವುದು ಇರುವುದಿಲ್ಲ ಎಂದರೆ ಸರಿಯಲ್ಲ . ನೀವು ಇದೇ ರೀತಿಯಾಗಿ ಸಾಲಗಾರರು ಹಣ ಮರು ಪಾವತಿ ಮಾಡಿದರೂ ಸಹ ಸುಳ್ಳಾಗಿ ಸಾಲದ ಬದ್ರತೆಗಾಗಿ ನೀಡಿದ ಚೆಕ ಹಾಜರ ಪಡಿಸಿ ಮತ್ತು ಹೊಸ ಸಾಲಗಳನ್ನು ಸೃಷ್ಟಿ ಮಾಡಿ ಕೊಂಡು ಆರೋಪಿ ವಿರುದ್ದ ಸುಳ್ಳು ಕೇಸ ಹಾಕಿರುತ್ತಿರಿ ಎಂದರೆ ಸರಿಯಲ್ಲ . ಈ ಬಗ್ಗೆ ನಿಮ್ಮ ಅಧ್ಯಕ್ಷರು ಮತ್ತು ವ್ಯವಸ್ಥಾಪಕರನ್ನು ಕರೆಸಿ ಸಾಕ್ಷ್ಯ ಮಾಡಿಸಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ . ಆರೋಪಿ ಸಂಪೂರ್ಣವಾಗಿ ನಿರಪರಾಧಿ ಯಾಗಿದ್ದು ಯಾವುದೆ ಸಾಲ ಪಡೆದುಕೊಂಡದ್ದು ಇಲ್ಲ ಚೆಕ ನ್ನು ಕೊಟ್ಟದ್ದು ಇಲ್ಲ ಮತುತ ಸಾಲ ಮರು ಪಾವತಿ ಮಾಡಲು ಬಾದ್ಯಸ್ಥ ನಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.